**8**

**ಸಾಕ್ಷಿಗೆ ದಿನಾಂಕ:12-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. K.C.C ವಕೀಲರಿಂದ ::**

ನಾನು ಆರೋಪಿತರ ವಿರುದ್ಧ 2 ಚೆಕ್ ಬೌನ್ಸ್ ಪ್ರಕರಣಗಳನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಸಿ.ಸಿ ನಂ.92/2022 ರಲ್ಲಿ ಸಲ್ಲಿಸಿರುವ ಚೆಕ್ ಬೌನ್ಸ್ ಪ್ರಕರಣದಲ್ಲಿ ಸಲ್ಲಿಸಿರುವ ಪ್ರಶ್ನಿತ ಚೆಕ್ ನ ಮೊತ್ತ 6 ಲಕ್ಷ ಆಗಿರುತ್ತದೆ ಎಂದರೆ ಸರಿ. ಸದರಿ ಸಿ.ಸಿ ನಂ.93/2022 ರಲ್ಲಿ ಸಲ್ಲಿಸಿರುವ ಚೆಕ್ ಬೌನ್ಸ್ ಪ್ರಕರಣದಲ್ಲಿ ಸಲ್ಲಿಸಿರುವ ಪ್ರಶ್ನಿತ ಚೆಕ್ ನ ಮೊತ್ತ 6 ಲಕ್ಷ ಆಗಿರುತ್ತದೆ ಎಂದರೆ ಸರಿ. ಆರೋಪಿತರ ಹೆಂಡತಿಯ ಹೆಸರು ಸುಜಾತ ಎಂದರೆ ಸರಿ. ಆರೋಪಿತರ ಹೆಂಡತಿಯ ವಿರುದ್ಧ ಚೆಕ್ ಬೌನ್ಸ್ ಪ್ರಕರಣವನ್ನು ಇದೇ ನ್ಯಾಯಾಲಯದಲ್ಲಿ ಸಿ.ಸಿ.ನಂ.101/2022 ರಂತೆ ಸಲ್ಲಿಸಿರುತ್ತೇನೆ ಮತ್ತು ಸದರಿ ಪ್ರಕರಣದ ಪ್ರಶ್ನಿತ ಚೆಕ್ ನ ಮೊತ್ತ 6 ಲಕ್ಷ ಆಗಿರುತ್ತದೆ ಎಂದರೆ ಸರಿ.

2. ನಾನು ನಾಲ್ಕನೇ ತರಗತಿವರೆಗೆ ಓದಿದ್ದೇನೆ. ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು ವಾಸ ಇರುತ್ತೇವೆ. ನಮ್ಮ ಸಂಸಾರದಲ್ಲಿ ನಾನು ಒಬ್ಬನೇ ದುಡಿಯುತ್ತಿದ್ದೇನೆ. ಸಾಕ್ಷಿಯು ಮುಂದುವರಿದು, ನನ್ನ ಇಬ್ಬರು ಮಕ್ಕಳು 6-7 ವರ್ಷಗಳಿಂದ ಬೆಂಗಳೂರಿನಲ್ಲಿ ದುಡಿಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಇಬ್ಬರು ಮಕ್ಕಳು ಸಹ ಯಾವುದೇ ದುಡಿಮೆ ಮಾಡುತ್ತಿಲ್ಲ ನನ್ನ ಮೇಲೆ ಅವಲಂಬಿತರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳ ಆದಾಯದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ.

3. ನನ್ನ ಮಗಳ ಹೆಸರು ನಾಗಶ್ರೀ ಮತ್ತು ನಾಗರತ್ನ. ನಿಪಿ-8 ರ ಪರವಾನಗಿಯನ್ನು 2019 ನೇ ಸಾಲಿಗೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ-8 ಪರವಾನಗಿ ಪತ್ರವನ್ನು ಪಡೆಯುವ ಪೂರ್ವದಲ್ಲಿ ಮತ್ತು ನಂತರದಲ್ಲಿ ಪರವಾನಗಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು 2018 ನೇ ಮತ್ತು 2020 ನೇ ಇಸವಿಯಲ್ಲಿ ಪರವಾನಗಿಯನ್ನು -

ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಆರೋಪಿತರಿಗೆ ನಗದು ರೂಪದಲ್ಲಿ ಆಗಲೀ ಅಕೌಂಟ್ ಮುಖಾಂತರವಾಗಲೀ ಯಾವುದೇ ಸಾಲದ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ನಾನು ಆರೋಪಿತರಿಗೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಜಲ್ಲಿ, ಎಂ.ಸಾಂಡ್ ಸಾಮಾಗ್ರಿಗಳನ್ನು ಮತ್ತು ಜೆ.ಸಿ.ಬಿ ಮತ್ತು ವಾಟರ್ ಟ್ಯಾಂಕ್ ಗಳನ್ನು ಬಾಡಿಗೆಗೆ ನೀಡಿದ್ದೆ ಎಂದು ನುಡಿಯುತ್ತಾರೆ.

4. ನಾನು ಸದರಿ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಲಾರಿ ಮತ್ತು ಟ್ರಾಕ್ಟರ್, ಟಿಪ್ಪರ್ ವಾಹನಗಳನ್ನು ಹೊಂದಿದ್ದೇನೆ ಮತ್ತು ಈ ಬಗ್ಗೆ ದಾಖಲೆಗಳನ್ನು ಹೊಂದಿರುತ್ತೇನೆ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರುವುದಿಲ್ಲ. ನಾನು ಕೃಷಿ ಮಾಡುವುದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ನನ್ನ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. 20,000/- ಗಿಂತ ಹೆಚ್ಚಿನ ಹಣದ ವ್ಯವಹಾರವನ್ನು ನಗದು ರೂಪದಲ್ಲಿ ಮಾಡಲು ಅವಕಾಶ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಹಣಕಾಸಿನ ವ್ಯವಹಾರವನ್ನು ಬ್ಯಾಂಕ್ ಖಾತೆಯ ಮುಖಾಂತರ ಮಾಡುತ್ತೇನೆ. ನಾನು ಶೃಂಗೇರಿಯಲ್ಲಿರುವ ಕರ್ನಾಟಕ ಬ್ಯಾಂಕ್ ಶಾಖೆಯ ಖಾತೆ ಹಾಗೂ ಎಸ್.ಬಿ.ಐ ಶೃಂಗೇರಿಯಲ್ಲಿ ಖಾತೆ ಹೊಂದಿದ್ದೇನೆ.

5. ನಾನು ನನ್ನ ಟಿಪ್ಪರ್ ಲಾರಿ ಮತ್ತು ಟ್ರಾಕ್ಟರ್ ನಿಂದ ಬಂದಿರುವ ಆದಾಯದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಆರೋಪಿತರು ಜಿ.ಎಸ್.ಟಿ ಹೊಂದಿದ್ದಾರೆ ಎಂದರೆ ಸರಿ. ಆರೋಪಿತರ ಜಿ.ಎಸ್.ಟಿ ಸಂಖ್ಯೆಯ ಅಡಿಯಲ್ಲಿ ಕಟ್ಟಡ ಸಾಮಾಗ್ರಿಗಳನ್ನು ಖರೀದಿ ಮಾಡಿ, ಸರಬರಾಜು ಮಾಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಆರೋಪಿತರು ಹಾಗೆ ಕೇಳಿದ್ದರೆ ಆರೋಪಿತರ ಜಿ.ಎಸ್.ಟಿ ಸಂಖ್ಯೆಯ ಅಡಿಯಲ್ಲಿ ಕಟ್ಟಡ ಸಾಮಾಗ್ರಿಗಳನ್ನು ಖರೀದಿ ಮಾಡಿ, ಸರಬರಾಜು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಆರೋಪಿತರು ಸದರಿ ಕಟ್ಟಡ ಸಾಮಾಗ್ರಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ಅವರ ಜಿ.ಎಸ್.ಟಿ ಸಂಖ್ಯೆಯನ್ನು ನೀಡಿರಲಿಲ್ಲ ಆದ್ದರಿಂದ ನನ್ನ ಜಿ.ಎಸ್.ಟಿ ಸಂಖ್ಯೆಯಲ್ಲಿಯೇ ಕಟ್ಟಡ

ಸಾಮಾಗ್ರಿಗಳನ್ನು ಖರೀದಿ ಮಾಡಿ ಆರೋಪಿತರಿಗೆ ನೀಡಿರುತ್ತೇನೆ. ಆರೋಪಿತರು ಜಿಲ್ಲಾ ಪಂಚಾಯಿತಿ ಅಡಿಯಲ್ಲಿನ ಕಾಮಗಾರಿ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-9 ನನ್ನ ಹೆಸರಿನಲ್ಲಿರುವ ಜಿ.ಎಸ್.ಟಿ ಆಗಿರುತ್ತದೆ ಎಂದರೆ ಸರಿ. ನಿಪಿ-9 ರಲ್ಲಿ ಖರೀದಿ ಮಾಡಿರುವ ಕಟ್ಟಡ ಸಾಮಾಗ್ರಿಗಳನ್ನು ಆರೋಪಿತರಿಗೆ ಸರಬರಾಜು ಮಾಡಲಾಗಿದೆ ಎಂದು ನಿರೂಪಿಸಲು ಅದರ ಬಗ್ಗೆ ದಾಖಲಾಗಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿತರ ಜಿ.ಎಸ್.ಟಿ ಸಂಖ್ಯೆ ಅಡಿಯಲ್ಲಿ ಖರೀದಿ ಮಾಡಿದರೆ ಆರೋಪಿತರೇ ಸಂಪೂರ್ಣವಾಗಿ ಪಾವತಿ ಮಾಡಬೇಕಿತ್ತು. ಆರೋಪಿತರು ಹಣ ಪಾವತಿ ಮಾಡಲು ಆಗದೇ ಇದುದ್ದರಿಂದ ನನ್ನ ಜಿ.ಎಸ್.ಟಿ ಸಂಖ್ಯೆಯ ಅಡಿಯಲ್ಲಿ ಖರೀದಿ ಮಾಡಿ ಆರೋಪಿಗೆ ಸರಬರಾಜು ಮಾಡಿದೆ ಎಂದು ನುಡಿಯುತ್ತಾರೆ. ಯಾರ ಜಿ.ಎಸ್.ಟಿ ಸಂಖ್ಯೆಯ ಅಡಿಯಲ್ಲಿ ಸಾಮಾಗ್ರಿಗಳನ್ನು ಖರೀದಿ ಮಾಡುತ್ತಾರೋ ತದನಂತರ ಅದೇ ಜಿ.ಎಸ್.ಟಿ ಸಂಖ್ಯೆಯ ಖಾತೆಗೆ ತೆರಿಗೆಯ ಹಣ ಮರುಪಾವತಿ ಆಗುತ್ತದೆ ಎಂದರೆ ಸರಿ.

6. ಕಂಟ್ರಾಕ್ಟರ್ ಗಳಿಗೆ ಕಟ್ಟಡ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಪೂರ್ವದಲ್ಲಿ ಭದ್ರತೆಗೆ ದಾಖಲೆಗಳನ್ನು ಪಡೆದುಕೊಂಡು ತದನಂತರ ಕಟ್ಟಡ ಸಾಮಾಗ್ರಿಗಳನ್ನು ಸರಬರಾಜು ಮಾಡುತ್ತಾರೆ ಎಂದರೆ ಸರಿ. ನಾನು ಆರೋಪಿತರಿಂದ ಸಿ.ಸಿ ನಂ.92/2022 ಮತ್ತು ಸಿ.ಸಿ ನಂ.93/2022 ರಲ್ಲಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಶ್ನಿತ ಚೆಕ್ ಗಳನ್ನು ಭದ್ರತೆಗಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ವಾರ್ಷಿಕ ಆದಾಯ 25 ರಿಂದ 30 ಲಕ್ಷ ಇದೆ. ನನ್ನ ವಾರ್ಷಿಕ ವಹಿವಾಟು ಸುಮಾರು 1 ವರೆ ಇಂದ 2 ಕೋಟಿ ಇದೆ. 2018-19, 2019-20 ರ ಸಾಲಿನಲ್ಲಿ ನನ್ನ ವಾರ್ಷಿಕ ಆದಾಯ 25 ರಿಂದ 30 ಲಕ್ಷ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆರ್ಥಿಕ ವರ್ಷಗಳ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇರುವುದಿಲ್ಲ.

7. ಪ್ರಶ್ನಿತ ಚೆಕ್ ನಲ್ಲಿ ನಮೂದು ಮಾಡಿರುವ ಮೊತ್ತ ಯಾವ ಆಧಾರದ ಮೇಲೆ ತನಗೆ ಬರಬೇಕು ಎಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ತಾನು ಆರೋಪಿತರಿಗೆ ಸರಬರಾಜು ಮಾಡಿರುವ ಕಟ್ಟಡ ಸಾಮಾಗ್ರಿಗಳ ಬಾಬ್ತು ಬರಬೇಕಾಗಿರುತ್ತದೆ ಎಂದು-

ನುಡಿಯುತ್ತಾರೆ. ಈ ಬಗ್ಗೆ ರಸೀದಿಗಳನ್ನು ಈಗಾಗಲೇ ಆರೋಪಿತರಿಗೆ ನೀಡಿರುತ್ತೇನೆ. ಆರೋಪಿತರಿಗೆ ನಾನು ಯಾವುದೇ ರಸೀದಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರಸೀದಿಗಳ ನಕಲು ಪ್ರತಿಗಳು ನನ್ನ ಬಳಿ ಇರುವ ಬಗ್ಗೆ ಈಗ ಹೇಳಲು ಆಗುವುದಿಲ್ಲ. ನಾನು ಆರೋಪಿತರಿಗೆ ಯಾವುದೇ ರಸೀದಿಗಳನ್ನು ನೀಡದೇ ಇರುವುದರಿಂದ ನನ್ನ ಬಳಿ ರಸೀದಿ ಇರುವುದಿಲ್ಲ ಎಂದರೆ ಸರಿಯಲ್ಲ.

8. ನಿಪಿ-10 ನನ್ನ ಸ್ವಂತ ಡೈರಿಯಾಗಿರುತ್ತದೆ ಎಂದರೆ ಸರಿ. ಸದರಿ ಡೈರಿಯಲ್ಲಿ ನಾನೇ ಲೆಕ್ಕವನ್ನು ಬರೆಯುತ್ತೇನೆ ಮತ್ತು ಆಗಾಗ ನನ್ನ ಮಗಳು ಸಹ ನಾನು ನೀಡುವ ಮಾಹಿತಿಯ ಮೇರೆಗೆ ನನ್ನ ಮಗಳು ಮನೆಗೆ ಬಂದಾಗ ಬರೆಯುತ್ತಾಳೆ. ನಿಪಿ-10 ರಲ್ಲಿ ಆರೋಪಿತರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-10 ಲೆಕ್ಕದ ಪುಸ್ತಕವನ್ನು ನನ್ನ ವಹಿವಾಟಿನ ದಾಖಲೆಗಾಗಿ ಬರೆಯುತ್ತೇನೆ ಎಂದು ನುಡಿಯುತ್ತಾರೆ. ನಿಪಿ-10 ರಲ್ಲಿ ಆರೋಪಿತರ S.S Construction ರವರ ಜೊತೆ ವ್ಯವಹಾರ ಮಾಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿತರ ಹೆಸರು ರಾಘವೇಂದ್ರ ಎಂಬ ಹೆಸರನ್ನು ನಮೂದು ಮಾಡಿ ಅವರ ಹೆಸರಿನಲ್ಲಿಡಿಯಲ್ಲಿಯೇ ವ್ಯವಹರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-10 ಅನ್ನುಈ ಪ್ರಕರಣಕ್ಕೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಬಳಿ 2019 ನೇ ಇಸವಿಯಲ್ಲಿ ಜೆ.ಸಿ.ಬಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಬಳಿ ಜೆ.ಸಿ.ಬಿ ಇದುದ್ದರಿಂದ ನನ್ನಿಂದ ಜೆ.ಸಿ.ಬಿಯನ್ನು ಬಾಡಿಗೆ ಪಡೆಯುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.